ಶ್ರೀ ಜಿ. ಹೆಚ್. ಪಟೇಲ್.—ಸರ್ಕಾರದ ಜವಾಬ್ದಾರಿ ಏನಿದೆ, ಅದನ್ನು ನಾವು ಸಂಪೂರ್ಣವಾಗಿ ನಿಭಾಯಿಸಿದ್ದೇವೆ ನಾವು ಎಷ್ಟು ದೂರ ಹೋಗಿ ಸಹಾಯ ಮಾಡಬಹುದೋ ಅಷ್ಟೆಲ್ಲಾ ಸಹಾಯ ಮಾಡಲು ಸಿದ್ದವಿದ್ದೇವೆ. ಆದರೆ ಅದರ ಮಾಲೀಕರು ಹಲವಾರು ಸಲ ಚರ್ಚೆಗೆ ಬಂದಾಗ ಯಾವುದೇ ಒಂದು ಇತ್ಯರ್ಥಕ್ಕೆ ಬರುತ್ತಿಲ್ಲ. ಈ ಬಗ್ಗೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಬಿಟ್ಟು ಮತ್ತೆ ಬೇರೆ ಏನನ್ನೂ ಮಾಡುವುದಕ್ಕಾಗುವುದಿಲ್ಲ. ಇದು ನಿಮಗೂ ಗೊತ್ತಿದೆ, ಈಗ ಇದನ್ನು ಬಿ.ಐ.ಎಫ್.ಆರ್.ಗೆ ರೆಫರ್ ಮಾಡಿದ್ದೇವೆ. ಅವರು ಈ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಅದರ ಪ್ರಕಾರ ಈ ಮಿಲ್ ಮಾಲೀಕರು ನಡೆದುಕೊಳ್ಳಬೇಕಾಗುತ್ತದೆ. ಆದರೆ ಇದನ್ನು ಸರ್ಕಾರವೇ ವಹಿಸಿಕೊಂಡು ನಡೆಸುವುದಕ್ಕಾಗುವುದಿಲ್ಲ.

ರಾಜ್ಯದಲ್ಲಿನ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನಿಲುಗಡೆ

೫೮೨. ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ರಾಜ್ಯಾದ್ಯಂತ ನದಿಗಳ ದಂಡೆಗಂಟ ಇರುವ ಪಂಪುಸೆಟ್ಟುಗಳ ವಿದ್ಯುತ್ ಪೂರೈಕೆಯನ್ನು ಕಡಿಯುವ ನೀರಿನ ತೊಂದರೆ ಬರುವ ಕಾರಣದಿಂದ ಜನವರಿ ೩೧ ರಿಂದ ಪಂಪುಸೆಟ್ಟುಗಳ ವಿದ್ಯುತ್ ಸರಬರಾಜು ಮಾಡುವುದಾಗಿ ಘೋಷಿಸಿದ್ದು, ಇದು ಅನಿವಾರ್ಯವಾಗಿ ಇದ್ದರೂ ಸಹಿತ ವಿದ್ಯುತ್ ನಿಲುಗಡೆ ಮಾಡುವುದು ಸರಿಯೇ ;

ಆ) ಹಿಂಗಾರು ಮಳೆ ಚೆನ್ನಾಗಿ ಆಗಿರುವುದರಿಂದ ನದಿಗಳಲ್ಲಿ ಸತತವಾಗಿ ನೀರು ಹರಿಯುವ ಪ್ರದೇಶಗಳಲ್ಲಿ ಹಾಗೂ ಕುಡಿಯುವ ನೀರಿನ ಯೋಜನೆಯನ್ನು ರೂಪಿಸದಿದ್ದಂಥ ಸ್ಥಳಗಳಲ್ಲಿ ವಿದ್ಯುತ್ ಪೂರೈಕೆಯ ನಿಲುಗಡೆ ಹಿಂದಕ್ಕೆ ಪಡೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಜಿ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು),—

ಅ) ಅನೇಕ ಗ್ರಾಮಗಳಿಂ ಮತ್ತು ನಗರಗಳಿಂ ಮತ್ತು ದೊಡ್ಡ ಪಟ್ಟಣಗಳೂ ಸಹ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವಕ್ಕೆ ಒಳಗಾಗಿದ್ದುದರಿಂದ ರಾಜ್ಯ ಮಟ್ಟದ ಸಣ್ಣ ನೀರಾವರಿ ಸಮನ್ವಯ ಸಮಿತಿಯ ಸಭೆಯಲ್ಲಿ, ನದಿಗಳಿಂದ ಪ್ರತಿ ವರ್ಷವು ಬೇಸಿಗೆ ಕಾಲದಲ್ಲಿ (ಫೆಬ್ರವರಿಯಿಂದ ಜೂನ್ ಕೊನೆಯವರೆಗೆ) ನೀರಾವರಿಗೆ ನೀರನ್ನು ಎತ್ತುವುದನ್ನು ನಿಷೇಧಿಸಬೇಕೆಂದು ನಿರ್ಧರಿಸಲಾಯಿತು. ಇಂತಹ ಗ್ರಾಮಗಳಿಂ ಮತ್ತು ನಗರಗಳಿಗೆ ಕುಡಿಯುವ ನೀರಿನ ಅಭಾವವು ಉಂಟಾಗದಿರಲೆಂಬ ಉದ್ದೇಶದಿಂದ ಇಂತಹ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕವನ್ನು ತೆಗೆದುಹಾಕಬೇಕೆಂದು ಸುತ್ತೋಲೆಯಲ್ಲಿ ಸೂಚನೆ ಕೊಡಲಾಯಿತು.

ಆ) ರೈತರಿಗೆ ಅನಾನುಕೂಲವಾಗುತ್ತದೆಂದು ಜನವಿಗಳು ಬಂದಿರುವುದರಿಂದ ಮತ್ತು ಕುಡಿಯುವ ನೀರಿನ ಲಭ್ಯತೆಯು ಸುಧಾರಿಸಿರುವುದರಿಂದಲೂ ಇಂತಹ ನದಿ ದಂಡೆಗಳ ಮೇಲಿನ ನೀರಾವರಿ ಪಂಪು ಸೆಟ್ಟುಗಳಿಗೆ ೧೯೮೮ನೇ ಇಸವಿಯ ಬೇಸಿಗೆ ತಿಂಗಳುಗಳಲ್ಲಿ ವಿದ್ಯುತ್ ಸಂಪರ್ಕವನ್ನು ತೆಗೆದುಹಾಕಬಾರದೆಂದು ವಿದ್ಯುತ್ ಮಂಡಳಿಯವರಿಗೆ ಸೂಚನೆ ಕೊಡಲಾಗಿದೆ.

(ಪ್ರಶ್ನೆ ೮೬ (೭೫೯) ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ)

ತುಂಗಭದ್ರಾ ಫೈಬರ್ಸ್ ಕಾರ್ಖಾನೆ ಬಗ್ಗೆ ವಿಜಯನಗರ

೫೮೯. ಶ್ರೀ ಯು. ಭೂಪತಿ (ಸಂಡೂರು) —ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಫೈಬರ್ಸ್ ಕಾರ್ಖಾನೆಯಿಂ ಉತ್ಪಾದನೆಯನ್ನು ನಡಿಸುತ್ತಿದೆಯೇ ;

ಅ) ಯಾವ ದಿನಾಂಕದಿಂದ ಉತ್ಪಾದನೆ ಪ್ರಾರಂಭಿಸಲಾಯಿತು ಹಾಗೂ ಎಂದಂ ನಿಲ್ಲಿಸಲಾಯಿತು; ಉತ್ಪಾದನೆ ನಿಲ್ಲಿಸಲು ಕಾರಣಗಳೇನು ;

ಇ) ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕಿರುವ ಈ ಕಾರ್ಖಾನೆಯನ್ನು ಪ್ರಾರಂಭಿಸಲು ಸರಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೆ.ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು).—

ಅ) ಇಲ್ಲಾ.

ಆ) ೧೯೮೪ನೆಯ ಇಸವಿ ಆಗಸ್ಟ್ ತಿಂಗಳಲ್ಲಿ ಕಾರ್ಖಾನೆಯು ತನ್ನ ಪ್ರಯೋಗಾತ್ಮಕ ಉತ್ಪಾದನೆಯನ್ನು ಪ್ರಾರಂಭಿಸಿತು, ೧೯೮೫ರ ಜನವರಿ ಕೊನೆಯಿಂದ ಉತ್ಪಾದನೆಯನ್ನು ನಿಲ್ಲಿಸಲಾಯಿತು. ಉತ್ಪಾದನೆಯನ್ನು ನಿಲ್ಲಿಸಲು ಕಾರಣ:

೧) ಪ್ರಯೋಗಾತ್ಮಕ ಉತ್ಪಾದನೆಯಲ್ಲಿ ಆದ ಅಧಿಕವಾದ ನಷ್ಟ ;

೨) ಅನಾನುಕೂಲ ಮಾರುಕಟ್ಟೆ ಪರಿಸ್ಥಿತಿ ;

೩) ಕೇಂದ್ರ ಸರ್ಕಾರದವರು ನೂಲಿನ ಮೇಲೆ ವಿಧಿಸಿರುವ ಅಬ್ಕಾರಿ ಸುಂಕ ;

೪) ಅನಿರ್ಬಂಧಿತವಾಗಿ ಆಮದಾಗುತ್ತಿರುವ ಕಡಿಮೆ ಬೆಲೆಯ ಪಾಲಿನಾಸಿಕ ನೂಲಿನಿಂದಾಗಿ ;

೫) ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಹಾಗೂ ಕೊರತೆ ಮತ್ತು ಮೇಲ್ಕಂಡ ಕಾರಣಗಳಿಂದ ಉಂಟಾದ ನಷ್ಟದಿಂದ ಮತ್ತು

೬) ವ್ಯವಹಾರ ಬಂಡವಾಳವಿಲ್ಲದೆ ಇರುವುದಂ.

ಇ) ಕೆ.ಎಸ್.ಐ.ಐ.ಡಿ.ಸಿ. ಮತ್ತು ಶ್ರೀ ಮುರುಗೇಶ್‌ನವರು ಮತ್ತೆ ಈ ಕಾರ್ಖಾನೆಯನ್ನು ಪುನಃ ಪ್ರಾರಂಭಿಸಲಂ ಐ.ಡಿ.ಬಿ.ಐ. ಯಿಂದ ನೆರವು ಕೋರಿ ಮಾತುಕತೆ ನಡೆಸುತ್ತಿದ್ದಾರೆ. ಒಂದು ನಿರ್ದಿಷ್ಟ ನಿರ್ಣಯಕ್ಕೆ ಸಧ್ಯದಲ್ಲೆ ಬರೆಬಹುದೆಂದಂ ಆಶಿಸಲಾಗಿದೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ, ಈ ಕೈಗಾರಿಕೆ ಪ್ರಾರಂಭವಾಗಿದ್ದು ೧೯೮೪ನೇ ಇಸವಿ ಆಗಸ್ಟ್ ತಿಂಗಳಲ್ಲಿ, ಉತ್ಪಾದನೆ ನಿಲ್ಲಿಸಿದ್ದುದು ಜನವರಿ ೧೯೮೫ರಲ್ಲಿ. ಅಂದರೆ ೫ ತಿಂಗಳೂ ಕೂಡ ಫ್ಯಾಕ್ಟರಿ ನಡೆಯಲಿಲ್ಲ ಅದೂ ಟ್ರಯಲ್ ಪ್ರೊಡಕ್ಷನ್, ರೆಗ್ಯುಲರ್ ಪ್ರೊಡಕ್ಷನ್ ಅಲ್ಲ. ಈ ಟ್ರಯಲ್ ಪ್ರೊಡಕ್ಷನ್‌ನಲ್ಲಿ ಅಂದರೆ ಈ ೫ ತಿಂಗಳಲ್ಲಿ ಎಷ್ಟು ಉತ್ಪಾದನೆಯಾಗಿದೆ ? ಎಷ್ಟು ನಷ್ಟವಾಗಿದೆ ಎಂದು ಹೇಳಿದರೆ ಒಳ್ಳೆಯದು, ಫ್ಯಾಕ್ಟರಿಯನ್ನು ನಿಲ್ಲಿಸಲಾಗಿದೆ, ಅದನ್ನು ಲಾಕೌಟ್ ಮಾಡಲಿಲ್ಲ ಕ್ಲೋಸ್ ಮಾಡಲಿಲ್ಲ, ಆ ರೀತಿ ಬೇಕಾದರೂ ಮಾಡಿ. ಇದು ಏನಾಗಿದೆಯೆಂದರೆ ಗೌಡಿಕೆ ತರಹ ಆಗಿದೆ. ಗೌಡರ ಫ್ಯಾಕ್ಟರಿ ನಿಲ್ಲಿಸಿಬಿಡಲೇ ಎಂದು ಹೇಳುವ ಲೆಕ್ಕದಲ್ಲಿ ಆಗಿದೆ. ನಾನು ಕೇಳುವುದು ಏನೆಂದರೆ, ಈ ಮೂರು ವರ್ಷಗಳಲ್ಲಿ ಸರ್ಕಾರದವರು ಏನು ಮಾಡಿದರು? ಈಗ ಕೆ.ಎಸ್.ಎ.ಐ.ಡಿ.ಸಿ ಮತ್ತು ಶ್ರೀ ಮುರುಗೇಶ್ ನವರು ಮತ್ತೇ ಈ ಕಾರ್ಖಾನೆಯನ್ನು ಪುನಃ ಪ್ರಾರಂಭಿಸಲು ಐ.ಡಿ.ಬಿ.ಐ.ಯಿಂದ ನೆರವು ಕೋರಿ ಮಾತುಕತೆ ನಡೆಸುತ್ತಿದ್ದಾರೆ. ವರ್ಕಿಂಗ್ ಕ್ಯಾಪಿಟಲ್‌ಗೆ ಪ್ರಯತ್ನ ಮಾಡುತ್ತಾ ಇದ್ದಾರೆ ಎಂದು ಹೇಳಿದಿರಿ. ಕೇವಲ ೫–೬ ಲಕ್ಷ ಇನ್ವೆಸ್ಟ್ ಮಾಡಿರುವ ಕಾರ್ಖಾನೆಯಲ್ಲ. It is a joint sector where the Government Officer is the Chairman and in which 58 crores of rupees is invested ಇದರಲ್ಲಿ ಪಬ್ಲಿಕ್ ಮನಿ ಇದೆ ಸರ್ಕಾರದ ಮನಿ ಇದೆ. ಸರ್ಕಾರಿ ಸಂಸ್ಥೆಗಳ ಹಣ ಇದೆ. ಕೆ.ಆರ್.ಎಂಲ್ ತರಹ ಅಲ್ಲ ಆಥವಾ ಹಳೇ ಹ್ಯಾಂಡ್‌ಲೂಂ ಕೈಗಾರಿಯಲ್ಲ. ಹೈಲಿ ಮಾಡರ್ನೈಸ್ಡ್ ಆಂಡ್ ಮೆಕನೈಸ್ಡ್ ಇಂಡಸ್ಟ್ರಿ. ಇದು ಇಂತಹ ಇಂಡಸ್ಟ್ರಿ ಬಂದ್ ಆಗುತ್ತದೆ ಎಂದರೆ ೩ ವರ್ಷಗಳಿಂದ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ದಯಮಾಡಿಹೇಳಿ ?

ಶ್ರೀ ಜೆ.ಹೆಚ್. ಪಟೇಲ್.—ಈ ಬಗ್ಗೆ ನಾನಂ ಹಿಂದೆ ಹೇಳಿದ್ದೇನೆ. ಇದು ಒಂದು ಖಾಸಗಿ ಸಂಸ್ಥೆ. ಈ ಕಾರ್ಖಾನೆ ಪ್ರಾರಂಭವಾದ ಮೇಲೆ ಯಾವುದೋ ಒಂದು ಹಂತದಲ್ಲಿ ಸರ್ಕಾರ ಬಂಡವಾಳವನ್ನು ಹಾಕಿದರೆ ಈ ಕಾರ್ಖಾನೆ ನಡೆಯಬಹುದು ಎನ್ನುವ ನಿರೀಕ್ಷೆ ಮೇಲೆ ಷೇರ್ ಕ್ಯಾಪಿಟಲ್ ೧½ ಕೋಟಿ ರೂಪಾಯಿಗಳನ್ನು ಹಾಕಿದೆವು. ಡೆವಲಪ್‌ಮೆಂಟ್ ಲೋನ್ ಸೇರಿಸಿದರೆ ೩½ ಕೋಟಿ ರೂಪಾಯಿ

ಗಳ ಬಂಡವಾಳ ತೊಡಗಿಸಿದೆವು. ೧೯೮೪ರಲ್ಲಿನೇ ಇಸವಿ ಆಗಸ್ಟ್ ತಿಂಗಳಲ್ಲಿ ಈ ಕಾರ್ಖಾನೆ ಪ್ರಾರಂಭವಾಯಿತು. ಅದು ಪ್ರಾರಂಭವಾಗುವಾಗಲೇ ಅದಕ್ಕೆ ರೋಗ ಬಂತು, ಅದಕ್ಕೆ ಹಲವಾರು ಕಾರಣಗಳಿವೆ. ಬಂಡವಾಳದ್ದು ಒಂದೇ ಪ್ರಾಬ್ಲಂ ಅಲ್ಲ. ಟೆಕ್ನಾಲಜಿ ಪ್ರಾಬ್ಲಂ ಬಂತು, ಮಾರ್ಕೆಟಿಂಗ್ ಪ್ರಾಬ್ಲಂ ಬಂತು. ಇಂಪೋರ್ಟ್ ಮಾಡಿದ್ದರಿಂದ ಕಾಂಪಿಟಿಷನ್ ಜಾಸ್ತಿಯಾಯಿತು. ಹೀಗೆ ಹಲವಾರು ಕಾರಣಗಳಿಂದ ಅದರ ಕೆಲಸ ನಿಲ್ಲಿಸಿದೆ. ಹಾಕಿರತಕ್ಕಂಥ ಬಂಡವಾಳನ್ನು ವಾಪಸ್ ತೆಗೆದುಕೊಳ್ಳುವುದು ಹೇಗೆ ? ಐಡಿಬಿಐ ಅಥವಾ ಯಾವುದಾದರೂ ಭಾರತ ಮಟ್ಟದ ಹಣಕಾಸಿನ ಸಂಸ್ಥೆಗಳು ಅದಕ್ಕೆ ಬಂಡವಾಳ ಒದಗಿಸುವುದಕ್ಕೆ ಈಗ ೫ ಕೋಟಿ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲ್ ಬೇಕು.

ವಂದರುಗೇಶನ್‌ರವರು ಸಿಗುತ್ತಿಲ್ಲ. ಅವರು ಇಲ್ಲಿಗೆ ಬರುತ್ತಿಲ್ಲ. ನಾವು ಈ ಒಂದು ರೋಗಗ್ರಸ್ತ ಕಾರ್ಖಾನೆಯನ್ನು ಕೈಯಲ್ಲಿ ಹಿಡಿದುಕೊಂಡು ಕುಳಿತಿದ್ದೇವೆ. ನಮ್ಮ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಏತಕ್ಕೆ ಅಲ್ಲಿದ್ದಾರೆಂದರೆ. ನಾವು ಹಾಕಿರುವ ಬಂಡವಾಳವನ್ನು ನೋಡಿಕೊಂಡು ಕುಳಿತಿದ್ದಾರೆ, ಆ ಕಾರ್ಖಾನೆಯನ್ನು ನಡೆಸಬೇಕು. ವಿಧಿವತ್ತಾಗಿ ಏನಾದರೂ ಒಂದು ತೀರ್ಮಾನಕ್ಕೆ ಬನ್ನಿ ಎಂದು ಹೇಳುವುದಕ್ಕೆ ಅವರು ಮುಂದೆ ಬರುತ್ತಿಲ್ಲ. ನಾವು ಕಾನೂನು ರೀತಿ ಕ್ಲೋಸ್ ಮಾಡುವುದಕ್ಕೆ ಲೇ ಆಫ್ ಮಾಡಿ ಎಂದು ಹೇಳಬಹುದು. ಕಾರ್ಖಾನೆಯನ್ನು ಮೊದಲು ಪ್ರಾರಂಭ ಮಾಡಿದಂಥ ವಂದರುಗೇಶನ್‌ರವರು ತಮಿಳುನಾಡಿನಲ್ಲಿ ಇದ್ದಾರೆ. ಒಂದು ಸಾರಿ ಅವರು ಬಂದಿದ್ದರು, ೫೦ ಕೋಟಿ ತರುತ್ತೇನೆಂದು ಹೇಳಿ ಹೋದರು. ಕೆ. ಆರ್. ಮಿಲ್ ವಿಚಾರದಲ್ಲಿ ಯಾವ ರೀತಿಯಲ್ಲಿ ಸರ್ಕಾರ ಪ್ರಯತ್ನ ಮಾಡಿದರೂ, ಮಾಲೀಕರು ಆಗಾಗ್ಗೆ ಬಂದು ಏನೋ ಒಂದು ಹೇಳಿ ಹೋಗುತ್ತಿದ್ದರು, ಇದು ಆಸ್ಪೆ. ಮಿಲ್ ಮಾಲೀಕರಿಗೆ ಮಿಲ್‌ನ್ನು ನಡೆಸತಕ್ಕ ಇರಾದೆ ಇಲ್ಲ, ಇವತ್ತು ನಾವು ಹಾಕಿರತಕ್ಕ ಬಂಡವಾಳ ಉಳಿಸಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡಲು ಮುಂದೆ ಬಂದಿದ್ದೇವೆ. That is a very highly competitive market, Mr. Speaker.

ರಾಷ್ಟ್ರದಲ್ಲಿ ಈ ಉತ್ಪನಗಳನ್ನು ಮಾಡತಕ್ಕ ಕಂಪನಿಗಳು ರೋಗಗ್ರಸ್ತವಾಗಿವೆ. ಐ. ಡಿ. ಬಿ.ಐ; ಜೊತೆಗೆ ಕೊನೆ ಸುತ್ತಿನ ಮಾತುಕತೆಯಲ್ಲಿ ಹಣಕಾಸಿನ ಸಹಾಯ ದೊರಕಿದರೆ ಪುನಃ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎ. ಎಸ್. ಕೃಷ್ಣನ್.—ಇವೊತ್ತು ಆರ್ಟಿಫಿಷಿಯಲ್ ಫೈಬರ್ಸ್‌ಗೆ ಕಾಂಪಿಟೇಷನ್ ಇದ್ದು ಒಳ್ಳೆಯ ಮಾರ್ಕೆಟ್ ಇದೆ. ಈ ಕಾರ್ಖಾನೆಗೆ ಸುಮಾರು ೫೦ ಕೋಟಿ ರೂಪಾಯಿಗಳ ಬಂಡವಾಳ ಹಾಕಲಾಗಿದೆ. ಕಾಂಪಿಟೇಷನ್ ಇರುವಾಗ ಲಾಸ್ ಆಗತಕ್ಕ ಪ್ರಶ್ನೆ ಬರುವುದಿಲ್ಲ. ಹೆಚ್ಚು ಲಾಭ ಬರತಕ್ಕ ಒಳ್ಳೆಯ ಮಿಷನರಿ ಇರತಕ್ಕ ಕಾರ್ಖಾನೆಯನ್ನು ನಡೆಸುವುದಕ್ಕಾಗುವುದಿಲ್ಲ ಅಂದರೆ ಹೇಗೆ ? ಸರ್ಕಾರದ ಕರ್ನಾಟಕ ರಿಲೀಫ್ ಅಂಡರ್ ಟೇಕಿಂಗ್ ಪ್ರಕಾರ ಏತಕ್ಕೆ ಇದನ್ನು ತೆಗೆದುಕೊಳ್ಳಬಾರದು ? ಇದಕ್ಕೆ ಹಣ ಕೊಡಬೇಕಾಗಿಲ್ಲ. ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಮುಂದುವರಿಸಿಕೊಂಡು ಹೋಗ ಬಹುದು. ಎಂ. ಇ. ಐ. ಗೆ ಮಾಡಿದಂತೆ ಮಾಡಬಹುದು. ಇಲ್ಲಿ ಅಂಥ ಕಷ್ಟ ಏನೂ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್.— ಎಂ. ಇ. ಐ ಗೆ ಕಡಿಮೆ ಬಂಡವಾಳ ಹಾಕಲಾಗಿತ್ತು. ಈ ಕಾರ್ಖಾನೆಯನ್ನು ಪ್ರಾರಂಭ ಮಾಡಿದ್ದೇ ೩೦ ಕೋಟಿ ಬಂಡವಾಳ ಹಾಕಿ. ಇದನ್ನು ಪುನಃ ಪ್ರಾರಂಭ ಮಾಡಬೇಕಾದರೆ ಅಫ್‌ಗ್ರೇಡೆಡ್ ಟೆಕ್ನಾಲಜಿಯನ್ನು ಬಳಸಿಕೊಂಡರೆ, ೬೦ ಕೋಟಿ ರೂಪಾಯಿ ಆಗುತ್ತದೆ. ಮತ್ತೆ ೩೦ ಕೋಟಿ ರೂಪಾಯಿ ಹಾಕಬೇಕಾದ ಪರಿಸ್ಥಿತಿ ಇದೆ ಈಗ ಸರ್ಕಾರ ಹಣ ಒದಗಿಸುವ ಪ್ರಮೇಯವೇ ಇಲ್ಲ. ಮಧುರಾಕೋಟ್ಸ್‌ನವರು ಬಂದು ನಡೆಸುವುದಕ್ಕೆ ಸಾಧ್ಯ. ನಾವು ಅವರಿಗೆ ಎಲ್ಲಾ ರೀತಿಯ ಉತ್ತೇಜನ ಕೊಡುತ್ತೇವೆ ನಾವು ಹಾಕಿರತಕ್ಕ ಬಂಡವಾಳ ಉಳಿಯಬೇಕು. ಕಾರ್ಮಿಕರಿಗೆ ಕೆಲಸ ಸಿಗಬೇಕು ಐ. ಡಿ. ಬಿ. ಐ ನವರು ಮಧುರಾಕೋಟ್ಸ್‌ನವರು ಪ್ರಯತ್ನ ನಡೆಸಲಾಗುತ್ತಿದೆ. ಈ ಮಧ್ಯೆ ಹೈಕೋರ್ಟಿನಲ್ಲಿ ಲಿಕ್ವಿಡೇಷನ್ ಪ್ರೊಸೀಡಿಂಗ್ಸ್ ಇದೆ. ಸಾಲಗಾರರು ಅರ್ಜಿ ಹಾಕಿದ್ದಾರೆ. ಯಾವರೀತಿ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಬಗ್ಗೆ ಆಲೋಚನೆ ಮಾಡಲಾಗುತ್ತಿದೆ.

ಶ್ರೀ ಯು. ಭೂಪತಿ.—ಮಾನ್ಯ ಕೃಷ್ಣನ್‌ರವರು ಹೇಳಿದಂತೆ ಇದು ಹಳೆಯ ಕೈಗಾರಿಕೆ. ಮಾನ್ಯ ಸಚಿವರು ಕೂಡ ಆಧುನಿಕ ಟೆಕ್ನಾಲಜಿಯನ್ನು ಬಳಸಬೇಕೆಂದರೆ. ೩೦ ಕೋಟಿ ರೂಪಾಯಿ ಹಾಕಬೇಕಾಗುತ್ತದೆಂದು ತಿಳಿಸಿದ್ದಾರೆ, ಮುರುಗೇಶನ್‌ರವರು ಐ. ಡಿ. ಬಿ. ಐ. ಜೊತೆ ಮಾತುಕತೆ ನಡೆಸುತ್ತಿದ್ದಾರೆಂದು ಹೇಳಿದರಿ. ಸರ್ಕಾರವೇ ಮಾತುಕತೆ ನಡೆಸಬಹುದು. ನಾನು ಈ ವಿಚಾರದಲ್ಲಿ ಹಲವಾರು ಸಾರಿ ಪ್ರಶ್ನೆ ಎತ್ತಿದಾಗ, ಒಂದು ಸಾರಿ ಕಾರ್ಮಿಕ ಸಂಘದ ಪ್ರತಿನಿಧಿಗಳ, ಅಧಿಕಾರಿಗಳ ಹಾಗೂ

ಮಾಲೀಕರುಗಳ ಸಭೆ ಕರೆಯಿರಿ ಎಂದು ಕೇಳಿದ್ದೆ. ಅದನ್ನು ತಾವು ಮಾಡಲಿಲ್ಲ. ಈ ಕೈಗಾರಿಕೆಗೆ ಫ್ರಾನ್ಸ್ ಮತ್ತು ಜಪಾನ್‌ನಿಂದ ಸುಮಾರು ಐನ್ನೂರೈವತ್ತು ಕೋಟಿ ರೂಪಾಯಿಗಳ ಯಂತ್ರೋಪಕರಣಗಳನ್ನು ಖರೀದಿ ಮಾಡಿದ್ದಾರೆ. ಯಂತ್ರೋಪಕರಣಗಳ ಖರೀದಿಯಲ್ಲಿ ಮಾರುಗೇಶನ್‌ರವರು, ಅಧಿಕಾರಿಗಳು ಸೇರಿ ಕೋಟ್ಯಾಂತರ ರೂಪಾಯಿ ಲೂಟಿ ಮಾಡಿದ್ದಾರೆ. In a highly modernised industry, mechanised industry, it is impossible. if it is mechanically viable. Misappropriation of the Capital must be probed.

ಶ್ರೀ ಜೆ. ಹೆಚ್. ಪಟೇಲ್.—ಸಿ. ಓ. ಡಿ. ಗೂ ಬೇಡ, ಸಿ. ಬಿ. ಐ ಗೂ ಬೇಡ. ಇರತಕ್ಕ ಲೆಕ್ಕ ಮೇಲೆ ಕಾಣುತ್ತಿದೆ, ಹೊಸದಾಗಿ ಹುಡುಕುವುದು ಏನೂ ಇಲ್ಲ. ಜಪಾನ್‌ನಿಂದ ಮೆಷಿನ್ ತಂದರು, ದುಡ್ಡು ತಿಂದರು ಅಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆಗ ಪಡೆದಂಥ ವ್ಯವಹಾರಗಳು ಗೊತ್ತಿಲ್ಲ, ಅದು ನಮ್ಮ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಬೊಮ್ಮಾಯಿಯವರು ಕೈಗಾರಿಕಾ ಮಂತ್ರಿಗಳಾಗಿ ಇದ್ದರು ಅವರನ್ನು ಕೇಳಿ ತಪ್ಪಾಗಿ ಗೊತ್ತಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಸರ್ಕಾರ ಎಂದರೆ ಹಿಂದೆ ಯಾರು ಇದ್ದರೂ ಈಗ ಇರುವವರು ಎಲ್ಲರೂ ಒಂದೇ ನನಗೆ ವಿಷಯ ಗೊತ್ತಿದೆ. ಹಾಗೆ ನೋಡಲಿಕ್ಕೆ ಹೋದರೆ ಹಿಂದೆ ಎಂ. ಎಸ್. ಕೃಷ್ಣ ಅವರು ಇದ್ದರು, ಅವರನ್ನು ಕರೆಯಿಸಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಬಹಳ ಸಮಯ ಆಗುತ್ತದೆ, ಅದು ಬೇಡ ಈಗ ಇರುವ ಪರಿಸ್ಥಿತಿಯಲ್ಲಿ ಆ ಮಾಲೀಕರ ಧೋರಣೆಯಿಂದ ಬಹಳ ಕಷ್ಟ ವಾಗಿದೆ. ಈಗಲೂ ಪ್ರಯತ್ನ ಮಾಡುತ್ತಿದ್ದೇವೆ. ಐಡಿಬಿಐ ಸಹಾಯದಿಂದಾಗಲಿ, ಮಧುರಾ ಕೋಟ್ಸ್ ಅವರಿಂದಾಗಲಿ. ಬಿ. ಐ. ಎಫ್. ಆರ್ ತೀರ್ಮಾನದ ಮೇಲೆ ಆಗಲಿ ಅಥವಾ ಹೈಕೋರ್ಟ್ ಲಿಕ್ವಿಡೇಷನ್ ಪ್ರೊಸೀಡಿಂಗ್ಸ್ ಮೇಲೆ ಆಗಲಿ. ಮೊದಲು ಯಾವುದಾ ತೀರ್ಮಾನ ಆಗುತ್ತದೆ ಅದರ ಪ್ರಕಾರ ಮಾಡುತ್ತೇವೆ.

(ಳಳಜ) ಶ್ರೀ ಎ. ಕೃಷ್ಣಪ್ಪ.—ಸದಸ್ಯರು ಗೈರುಹಾಜರು.

ಮಿನಿ ಜಲವಿದ್ಯುತ್ ಯೋಜನೆಗಳು

೮೯(೨೩೧) ಶ್ರೀ ಜಿ.ಎಸ್. ಆಚಾರ್ (ಬೈಂದೂರ್).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿದ್ಯುತ್ ಕೊರತೆಯನ್ನು ನೀಗಿಸಲು ಕಡಿಮೆ ವೆಚ್ಚದಲ್ಲಿ ಮಿನಿ ಜಲವಿದ್ಯುತ್ ಯೋಜನೆಗಳನ್ನು ಕಾರ್ಯಗತಗೊಳಿಸುವ ಯೋಜನೆ ಸರ್ಕಾರಕ್ಕಿದೆಯೇ :

ಆ) ಹಾಗಿದ್ದಲ್ಲಿ ಸದರಿ ಯೋಜನೆ ಬಗ್ಗೆ ಸಮೀಕ್ಷೆ ನಡೆದಿದೆಯೇ :

ಇ) ಆ ಪ್ರಕಾರ ಯೋಚಿತ ಸೂಚನೆಗಳಾವುವು :

ಈ) ಯಾವಾಗ ಕಾರ್ಯಾರಂಭ ಮಾಡಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು).—

ಅ) ಇದೆ.

ಆ) ನಡೆದಿದೆ.

ಇ) ಕ್ಯಾಪ್ಟೀವ್ ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿ ವಲಯ ಪಾಲುಗೊಳ್ಳುವಂತೆ ಅವಕಾಶ ನೀಡುವುದು ಸರ್ಕಾರದ ನೀತಿಯಾಗಿದೆ, ಅನುಬಂಧದಲ್ಲಿ ಸೂಚಿಸಿರುವ ೧೨ ಮಿನಿ ಹೈಡಲ್ ಯೋಜನೆಗಳನ್ನು ಖಾಸಗಿ ವಲಯಕ್ಕೆ ವಹಿಸಿಕೊಡಲಾಗಿದೆ.

ಈ) ಅನುಬಂಧದಲ್ಲಿ ಸೂಚಿಸಿರುವ ಕ್ರಮಾಂಕ ೨,೪,೫ ಮತ್ತು ೬ ಯೋಜನೆಗಳ ಕೆಲಸ ಪ್ರಗತಿಯಲ್ಲಿದೆ.